ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ,

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು- 560 003**

ಸಂಖ್ಯೆ:ಕಶಾಪ&ಮೌ.ನಿ.ಮಂ/ಪಿಯುಮೌಮಾ/ಪಫ/2025-26 ದಿನಾಂಕ: 27.10.2025

## ಸು ತ್ತೋ ಲೆ

**ವಿಷಯ:** ದ್ವಿತೀಯ ಪಿ.ಯು.ಸಿ ತರಗತಿಗಳಿಗೆ ಸರ್ಕಾರಿ ಆದೇಶದಂತೆ ಪರೀಕ್ಷೆ ನಡೆಸಿ ಫಲಿತಾಂಶವನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:** 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಪಿ 244 ಎಸ್‌ಎಲ್‌ಬಿ 2025 ದಿನಾಂಕ: 15.10.2025

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಪಿ 46 ಟಿಪಿಯು 2023, ಬೆಂಗಳೂರು ದಿನಾಂಕ: 10.07.2023

3. ನಿರ್ದೇಶಕರ ಕಛೇರಿ ಆದೇಶ ಸಂಖ್ಯೆ: ಪಪೂಶಿಇ/ಶೈ.ಶಾ-04/ಪರೀಕ್ಷೆ01/2013-14 ದಿನಾಂಕ: 17.12.2013

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಗು ಉಲ್ಲೇಖ (1) ರ ಸರ್ಕಾರಿ ಆದೇಶದಂತೆ 2025-26 ನೇ ಶೈಕ್ಷಣಿಕ ಸಾಲಿನಿಂದ **ಪ್ರಾಯೋಗಿಕ ಹಾಗು ಪ್ರಾಯೋಗಿಕವಲ್ಲದ ಪರೀಕ್ಷಾ ವಿಷಯಗಳಿಗೆ ಕನಿಷ್ಠ ಉತ್ತೀರ್ಣ ಶೇಕಡವಾರು ಪ್ರಮಾಣವನ್ನು** ನಿಗದಿಪಡಿಸಿ ಸರ್ಕಾರ ಅದೇಶಸಿದೆ. ಅದರಂತೆ ಭಾಷಾ ಮತ್ತು ಐಚ್ಚಿಕ ವಿಷಯಗಳಿಗೆ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಯು ಪ್ರಕಟಿಸಿರುವ ಪಠ್ಯವಸ್ತುವನ್ನು ಆಧರಿಸಿ ಪರೀಕ್ಷೆಗಳನ್ನು ಈ ಕೆಳಕಂಡ ಅಂಶಗಳಂತೆ ನಡೆಸಿ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ.

2025-26ನೇ ಶೈಕ್ಷಣಿಕ ವರ್ಷದಿಂದ **ಮನಃಶಾಸ್ತ್ರ (PSYCHOLOGY), ಗಣಕ ವಿಜ್ಞಾನ (COMPUTER SCIENCE) ಮತ್ತು ಗೃಹವಿಜ್ಞಾನ (HOME SCIENCE)** ವಿಷಯಗಳಿಗೆ ಹೊಸ ಪಠ್ಯಕ್ರಮವನ್ನು ಅಳವಡಿಸಿದ್ದು, ಹೊಸ ವಿದ್ಯಾರ್ಥಿಗಳು (FRESH STUDENTS) ಮತ್ತು ಖಾಸಗಿ ಅಭ್ಯರ್ಥಿಗಳಿಗೆ ಹೊಸ ಪಠ್ಯಕ್ರಮದನ್ವಯ ಪ್ರಶ್ನೆಪತ್ರಿಕೆ ರಚಿಸಲಾಗುತ್ತದೆ.

ಸದರಿ ವಿಷಯಗಳ **ಪುನರಾವರ್ತಿತ ಅಭ್ಯರ್ಥಿಗಳಿಗೆ 2025-26 ಮತ್ತು 2026-27ನೇ** ಸಾಲಿನ ಪರೀಕ್ಷೆಗಳಿಗೆ ಮಾತ್ರ ಹಳೇ ಪಠ್ಯಕ್ರಮದಂತೆ ಪ್ರಶ್ನೆಪತ್ರಿಕೆ ರಚಿಸಿ ಪರೀಕ್ಷೆ ನಡೆಸಲಾಗುತ್ತದೆ.

**2025-26ನೇ ಸಾಲಿನಿಂದ ಪರೀಕ್ಷೆಗೆ ಹಾಜರಾಗುವ ಹೊಸ (FRESHER), ಖಾಸಗಿ (PRIVATE) ಮತ್ತು ಪುನರಾವರ್ತಿತ (REPEATER) ಅಭ್ಯರ್ಥಿಗಳಿಗೆ ಈ ಕೆಳಕಂಡ ಕನಿಷ್ಠ ಉತ್ತೀರ್ಣ ಶೇಕಡವಾರು ಪ್ರಮಾಣ ಅನ್ವಯವಾಗುತ್ತದೆ.**

1. **<u>ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯಗಳಿಗೆ ಲಿಖಿತ ಪರೀಕ್ಷೆಯನ್ನು ಹಾಗೂ ಕನಿಷ್ಠ ಉತ್ತೀರ್ಣ ಶೇಕಡವಾರು ಪ್ರಮಾಣವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.</u>**

ಪ್ರಾಯೋಗಿಕ ಪರೀಕ್ಷೆ ಇಲ್ಲದ ಭಾಷಾ ಮತ್ತು ಐಚ್ಛಿಕ ವಿಷಯಗಳಿಗೆ (ಕರ್ನಾಟಕ ಸಂಗೀತ ಹಾಗು ಹಿಂದೂಸ್ಥಾನಿ ಸಂಗೀತ ವಿಷಯಗಳನ್ನು ಹೊರತುಪಡಿಸಿ) ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಯು ಪ್ರಕಟಿಸಿರುವ ಪಠ್ಯವಸ್ತುವನ್ನು ಆಧರಿಸಿ ಉಲ್ಲೇಖ (2) ರಂತೆ 80 ಅಂಕಗಳನ್ನು ಲಿಖಿತ ಪರೀಕ್ಷೆಗೆ ಹಾಗೂ 20 ಅಂಕಗಳನ್ನು ಆಂತರಿಕ ಮೌಲ್ಯಮಾಪನಕ್ಕೆ ನಿಗದಿಪಡಿಸಲಾಗಿದೆ.

ಆಂತರಿಕ ಮೌಲ್ಯಮಾಪನಕ್ಕೆ ಗರಿಷ್ಠ 20 ಅಂಕಗಳಿದ್ದು, ಇದಕ್ಕೆ ಯಾವುದೇ **ಕನಿಷ್ಠ ಅಂಕಗಳ ಮಿತಿಯನ್ನು** ನಿಗದಿಪಡಿಸಿರುವುದಿಲ್ಲ.

ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯಗಳಿಗೆ ಪ್ರಶ್ನೆಪತ್ರಿಕಾ ವಿನ್ಯಾಸ, ನೀಲಿನಕ್ಷೆ ಹಾಗು ಪ್ರಶ್ನೆ ಪತ್ರಿಕೆಗಳನ್ನು ಗರಿಷ್ಠ 80 ಅಂಕಗಳಿಗೆ ಸಿದ್ಧಪಡಿಸಲಾಗುತ್ತದೆ. ಪ್ರತಿ ವಿಷಯದ ಲಿಖಿತ ಪರೀಕ್ಷೆಯಲ್ಲಿ **ಗರಿಷ್ಠ 80 ಅಂಕಗಳಿಗೆ, ಕನಿಷ್ಠ 24 ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಆಂತರಿಕ ಅಂಕಗಳೂ ಸೇರಿ ಕನಿಷ್ಠ 30 ಅಂಕಗಳನ್ನು ಪಡೆದಲ್ಲಿ** ಹಾಗೂ **ಎಲ್ಲಾ ವಿಷಯಗಳಲ್ಲಿ ಒಟ್ಟಾರೆಯಾಗಿ ಶೇಕಡಾ 33 ಅಂಕಗಳನ್ನು ಪಡೆದಲ್ಲಿ ಅಂತಹ ಅಭ್ಯರ್ಥಿಯನ್ನು ಉತ್ತೀರ್ಣರಾಗಿದ್ದಾರೆ** ಎಂದು ಘೋಷಿಸಲಾಗುತ್ತದೆ.

2. **<u>ಪ್ರಾಯೋಗಿಕ ಪರೀಕ್ಷೆ ಇರುವ ವಿಷಯಗಳಿಗೆ ಲಿಖಿತ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆ ಹಾಗೂ ಕನಿಷ್ಠ ಉತ್ತೀರ್ಣ ಶೇಕಡವಾರು ಪ್ರಮಾಣವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.</u>**

ಅ. **ಕರ್ನಾಟಕ ಸಂಗೀತ ಹಾಗು ಹಿಂದೂಸ್ಥಾನಿ ಸಂಗೀತ ವಿಷಯ**ಗಳಲ್ಲಿ ಗರಿಷ್ಠ 40 ಅಂಕಗಳ ಲಿಖಿತ ಹಾಗು 60 ಅಂಕಗಳ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುತ್ತದೆ. ಉತ್ತೀರ್ಣರಾಗಲು **ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ 12 ಅಂಕಗಳನ್ನು ಹಾಗು ಪ್ರಾಯೋಗಿಕ ಪರೀಕ್ಷೆಯಲ್ಲಿ ಕನಿಷ್ಠ 18 ಅಂಕಗಳನ್ನು ಒಂದೇ ಪರೀಕ್ಷೆಯಲ್ಲಿ ಪಡೆಯುವುದು** ಕಡ್ಡಾಯವಾಗಿರುತ್ತದೆ. ಈ ಎರಡು ಅಂಶಗಳು ಸೇರಿ **ಕನಿಷ್ಠ 30 ಅಂಕಗಳನ್ನು ಪಡೆದಲ್ಲಿ** ಹಾಗೂ **ಎಲ್ಲಾ ವಿಷಯಗಳಲ್ಲಿ**

**ಒಟ್ಟಾರೆಯಾಗಿ ಶೇಕಡಾ 33 ಅಂಕಗಳನ್ನು ಪಡೆದಲ್ಲಿ ಅಂತಹ ಅಭ್ಯರ್ಥಿಯನ್ನು ಉತ್ತೀರ್ಣರಾಗಿದ್ದಾರೆ** ಎಂದು ಘೋಷಿಸಲಾಗುತ್ತದೆ.

ಆ. **NSQF ವಿಷಯ**ಗಳಲ್ಲಿ ಲಿಖಿತ ಪರೀಕ್ಷೆಯನ್ನು ಗರಿಷ್ಠ 60 ಅಂಕಗಳಿಗೆ ನಡೆಸಿ, 30 ಅಂಕಗಳಿಗೆ ಪರಿವರ್ತಿಸಲಾಗುವುದು. ಪ್ರಾಯೋಗಿಕ ಪರೀಕ್ಷೆಯನ್ನು ಗರಿಷ್ಠ 50 ಅಂಕಗಳಿಗೆ ನಡೆಸಲಾಗುತ್ತದೆ ಹಾಗು 20 ಅಂಕಗಳನ್ನು ಆಂತರಿಕ ಮೌಲ್ಯಮಾಪನಕ್ಕೆ ನಿಗದಿಪಡಿಸಲಾಗಿದೆ. **ಉತ್ತೀರ್ಣರಾಗಲು ಲಿಖಿತ ಪರೀಕ್ಷೆಯಲ್ಲಿ 30 ಅಂಕಗಳಿಗೆ ಕನಿಷ್ಠ 10 ಅಂಕಗಳು ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಕನಿಷ್ಠ 18 ಅಂಕಗಳನ್ನು ಒಂದೇ ಪರೀಕ್ಷೆಯಲ್ಲಿ ಪಡೆಯುವುದು ಕಡ್ಡಾಯವಾಗಿರುತ್ತದೆ.** ಈ ಮೂರು ಅಂಶಗಳು ಸೇರಿ **ಕನಿಷ್ಠ 30 ಅಂಕಗಳನ್ನು ಪಡೆದಲ್ಲಿ** ಹಾಗೂ **ಎಲ್ಲಾ ವಿಷಯಗಳಲ್ಲಿ ಒಟ್ಟಾರೆಯಾಗಿ ಶೇಕಡಾ 33 ಅಂಕಗಳನ್ನು ಪಡೆದಲ್ಲಿ ಅಂತಹ ಅಭ್ಯರ್ಥಿಯನ್ನು ಉತ್ತೀರ್ಣರಾಗಿದ್ದಾರೆ** ಎಂದು ಘೋಷಿಸಲಾಗುತ್ತದೆ.

ಇ. **ವಿಜ್ಞಾನ ಸಂಯೋಜನೆಯ ಪ್ರಾಯೋಗಿಕ ವಿಷಯಗಳಿಗೆ:-**

**ಭೌತಶಾಸ್ತ್ರ (PHYSICS), ರಸಾಯನಶಾಸ್ತ್ರ (CHEMISTRY), ಜೀವಶಾಸ್ತ್ರ (BIOLOGY), ಗಣಕ ವಿಜ್ಞಾನ (COMPUTER SCIENCE), ವಿದ್ಯುನ್ಮಾನಶಾಸ್ತ್ರ (ELECTRONICS) ಮತ್ತು ಗೃಹವಿಜ್ಞಾನ (HOME SCIENCE)** ವಿಷಯಗಳಿಗೆ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಯು ಪ್ರಕಟಿಸಿರುವ ಪಠ್ಯವಸ್ತುವನ್ನು ಆಧರಿಸಿ ಉಲ್ಲೇಖ (2) ರಂತೆ 70 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ಹಾಗೂ 30 ಅಂಕಗಳಿಗೆ ಪ್ರಾಯೋಗಿಕ ಪರೀಕ್ಷೆಯನ್ನು ನಿಗದಿಪಡಿಸಲಾಗಿದೆ.

ಸದರಿ ವಿಷಯಗಳಿಗೆ ಪ್ರಶ್ನೆಪತ್ರಿಕಾ ವಿನ್ಯಾಸ, ನೀಲಿನಕ್ಷೆ ಹಾಗು ಪ್ರಶ್ನೆ ಪತ್ರಿಕೆಗಳನ್ನು ಗರಿಷ್ಠ 70 ಅಂಕಗಳಿಗೆ ಸಿದ್ಧಪಡಿಸಲಾಗುತ್ತದೆ. ಪ್ರತಿ ವಿಷಯದ **ಲಿಖಿತ ಪರೀಕ್ಷೆಯಲ್ಲಿ ಗರಿಷ್ಠ 70 ಅಂಕಗಳಿಗೆ, ಕನಿಷ್ಠ 21 ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.** ಪ್ರಾಯೋಗಿಕ ಪರೀಕ್ಷೆ ಅಂಕಗಳೂ ಸೇರಿ **ಕನಿಷ್ಠ 30 ಅಂಕಗಳನ್ನು ಪಡೆದಲ್ಲಿ ಹಾಗೂ ಎಲ್ಲಾ ವಿಷಯಗಳಲ್ಲಿ ಒಟ್ಟಾರೆಯಾಗಿ ಶೇಕಡಾ 33 ಅಂಕಗಳನ್ನು ಪಡೆದಲ್ಲಿ ಅಂತಹ ಅಭ್ಯರ್ಥಿಯನ್ನು ಉತ್ತೀರ್ಣರಾಗಿದ್ದಾರೆ** ಎಂದು ಘೋಷಿಸಲಾಗುತ್ತದೆ.

ಪ್ರಾಯೋಗಿಕ ಪರೀಕ್ಷೆಗೆ ಗರಿಷ್ಠ 30 ಅಂಕಗಳಿದ್ದು, ಇದರಲ್ಲಿ ಯಾವುದೇ **ಕನಿಷ್ಠ ಅಂಕಗಳ ಮಿತಿಯನ್ನು** ನಿಗದಿಪಡಿಸಿರುವುದಿಲ್ಲ.

ಪ್ರಾಯೋಗಿಕ ಪರೀಕ್ಷೆಯಲ್ಲಿ ಗೈರು ಹಾಜರಾದರೆ ಅಥವಾ ಕಡಿಮೆ ಅಂಕ ಗಳಿಸಿದರೆ **ಮತ್ತೊಮ್ಮೆ ಪ್ರಾಯೋಗಿಕ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.**

ಪ್ರಸಕ್ತ ಶೈಕ್ಷಣಿಕ ಸಾಲಿನ **ಲಿಖಿತ ಪರೀಕ್ಷೆಯ ಎಲ್ಲಾ ವಿಷಯಗಳಿಗೆ ಹಾಗು ಎಲ್ಲಾ ಪ್ರಾಯೋಗಿಕ ವಿಷಯಗಳ ಪರೀಕ್ಷೆಗಳಿಗೆ ಗೈರುಹಾಜರಾದ ವಿದ್ಯಾರ್ಥಿಗಳಿಗೆ ಮಾತ್ರ ಮುಂದಿನ ಶೈಕ್ಷಣಿಕ ವರ್ಷದ ಪರೀಕ್ಷೆ-1 ರಲ್ಲಿ ಮಾತ್ರ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಅವಕಾಶವಿರುತ್ತದೆ.**

**ಪ್ರಾಯೋಗಿಕ ಪರೀಕ್ಷೆಗೆ ನಿಗದಿಪಡಿಸಿರುವ ಒಟ್ಟು 30 ಅಂಕಗಳನ್ನು ಈ ಕೆಳಕಂಡಂತೆ ವಿಂಗಡನೆ ಮಾಡಲಾಗಿದೆ.**

| | |
|---|---|
| ಎ) ಪ್ರಾಯೋಗಿಕ ಪರೀಕ್ಷೆ: - | 20 ಅಂಕಗಳು |
| ಬಿ) ಪ್ರತಿ ವಿಷಯದ ತಾತ್ವಿಕ ಮತ್ತು ಪ್ರಾಯೋಗಿಕ ತರಗತಿಗಳು ಸೇರಿ ಶೇಕಡ 75 ಹಾಜರಾತಿಗೆ: - | 05 ಅಂಕಗಳು |
| ಸಿ) ಪ್ರಾಯೋಗಿಕ ತರಗತಿಯ ದಾಖಲೆ (PRACTICAL RECORD) ಪುಸ್ತಕಕ್ಕೆ: - | 05 ಅಂಕಗಳು |

**ಲಿಖಿತ ಮತ್ತು ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ವಿದ್ಯಾರ್ಥಿಯು ಪ್ರತಿ ವಿಷಯದಲ್ಲಿ ತಾತ್ವಿಕ ಮತ್ತು ಪ್ರಾಯೋಗಿಕ ತರಗತಿಗಳೆರಡೂ ಸೇರಿ ಶೇ. 75 ರಷ್ಟು ಹಾಜರಾತಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ಅಂತಹ ವಿದ್ಯಾರ್ಥಿಯು ಪ್ರಾಯೋಗಿಕ ಪರೀಕ್ಷೆಗೆ ಹಾಜರಾದಲ್ಲಿ ಹಾಜರಾತಿಯ 05 ಅಂಕಗಳನ್ನು ನೀಡಲಾಗುತ್ತದೆ.**

ಅಭ್ಯರ್ಥಿಯು ಪತ್ರಿ ಪ್ರಾಯೋಗಿಕ ವಿಷಯದಲ್ಲಿ **ಶೇಕಡ 75 ರಷ್ಟು ಪ್ರಯೋಗಗಳನ್ನು ನಿರ್ವಹಿಸಿ, ದಾಖಲೆ ಪುಸ್ತಕ (PRACTICAL RECORD) ದಲ್ಲಿ ದಾಖಲಿಸಿ, ಸದರಿ ಪುಸ್ತಕವನ್ನು ಪ್ರಾಯೋಗಿಕ ಪರೀಕ್ಷೆಯಲ್ಲಿ ಹಾಜರುಪಡಿಸಿದಲ್ಲಿ ನಿಗದಿಪಡಿಸಿರುವ 05 ಅಂಕಗಳನ್ನು ನೀಡಲಾಗುತ್ತದೆ.**

ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲು ಪ್ರತಿ ವಿಷಯಕ್ಕೆ ಎರಡು ಗಂಟೆಗಳ ಅವಧಿಯನ್ನು ನಿಗದಿಪಡಿಸಲಾಗಿದೆ.

ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲು ಒಬ್ಬ ಆಂತರಿಕ ಪರೀಕ್ಷಕರು ಮತ್ತು ಒಬ್ಬ ಬಾಹ್ಯ ಪರೀಕ್ಷಕರನ್ನು ನೇಮಿಸುವುದು. **ಆಂತರಿಕ ಹಾಗೂ ಬಾಹ್ಯ ಪರೀಕ್ಷಕರಿಬ್ಬರೂ ಸೇರಿ ಪ್ರಾಯೋಗಿಕ ಪರೀಕ್ಷೆಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, ಪರೀಕ್ಷೆ ನಡೆಸಿ ಮತ್ತು ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡಿ, ವಿದ್ಯಾರ್ಥಿವಾರು ಅಂಕಗಳನ್ನು ಪ್ರತ್ಯೇಕವಾಗಿ online ನಲ್ಲಿ ಪರೀಕ್ಷಾ ದಿನದಂದೇ ಇಂದೀಕರಿಸುವುದು.**

ದ್ವಿತೀಯ ಪಿ.ಯು.ಸಿ ತರಗತಿಗಳ ಪ್ರಾಯೋಗಿಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ವಿಷಯವಾರು ಪ್ರಾಯೋಗಿಕ ಪರೀಕ್ಷಾ ಸಮಿತಿಗಳನ್ನು ರಚಿಸಿ ಇಲಾಖೆಯ ಮಾರ್ಗಸೂಚಿಯ ಪ್ರಕಾರ ಪ್ರಾಯೋಗಿಕ ಪರೀಕ್ಷೆಗಳು ನಡೆಯುವಂತೆ ಕ್ರಮವಹಿಸುವುದು.

2023 ಮತ್ತು ಹಿಂದಿನ ಪರೀಕ್ಷೆಗಳ ಪ್ರಾಯೋಗಿಕ ಪರೀಕ್ಷೆ ಇಲ್ಲದ ವಿಷಯಗಳಲ್ಲಿ ಅನುತ್ತೀರ್ಣರಾಗಿ 2026ರ ಪರೀಕ್ಷೆಗಳಿಗೆ ಪುನರಾವರ್ತಿತ ಅಭ್ಯರ್ಥಿಗಳಾಗಿ ಪರೀಕ್ಷೆ ಬರೆದಲ್ಲಿ ಸದರಿ ಅಭ್ಯರ್ಥಿಗಳು, ಲಿಖಿತ ಪರೀಕ್ಷೆಯಲ್ಲಿ 80 ಅಂಕಗಳಿಗೆ ಗಳಿಸಿದ ಅಂಕಗಳನ್ನು 100 ಅಂಕಗಳಿಗೆ ಉನ್ನತೀಕರಿಸಿ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ.

ಖಾಸಗಿ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ 80 ಅಂಕಗಳಿಗೆ ಗಳಿಸಿದ ಅಂಕಗಳನ್ನು 100 ಅಂಕಗಳಿಗೆ ಉನ್ನತೀಕರಿಸಿ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ.

**ಅಧ್ಯಕ್ಷರು,**
**ಕ.ಶಾ.ಪ & ಮೌನಿ.ಮಂಡಲಿ.**

**<u>ಸೂಕ್ತ ಕ್ರಮಕ್ಕಾಗಿ: -</u>**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ರವರಿಗೆ **(ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು)**
2. ರಾಜ್ಯದ ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ. **(ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು)**
3. ಹಿರಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಇವರಿಗೆ **(ಮಂಡಲಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ).**

**<u>ಪ್ರತಿಯನ್ನು: -</u>**

1. ಮಾನ್ಯ ಶಿಕ್ಷಣ ಸಚಿವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ, ಇವರ ಆಪ್ತಕಾರ್ಯದರ್ಶಿಯವರಿಗೆ ಸಲ್ಲಿಸುತ್ತಾ ಸುತ್ತೋಲೆಯ ಅಂಶಗಳನ್ನು ಮಾನ್ಯಸಚಿವರ ಅವಗಾಹನೆಗೆ ತರಲು.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ, ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ನಿರ್ದೇಶಕರು, (ಪರೀಕ್ಷೆಗಳು) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ಜಂಟಿ ನಿರ್ದೇಶಕರು (ಪಿ. ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6. ಉಪನಿರ್ದೇಶಕರು, (ಪಿ. ಯು ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7. ಹೆಚ್ಚುವರಿ/ಕಛೇರಿ ಪ್ರತಿ.